ಇದಲ್ಲದೆ ಮೋದಿ ಜೆರಾಕ್ಸ್ ಯಂತ್ರಗಳನ್ನು ಭೋಗ್ಯಕ್ಕೆ ಕೊಟ್ಟಾಗ ಅವುಗಳ ಮೇಲೆ ಆಗತಕ್ಕ ಭೋಗ್ಯ ತೆರಿಗೆ (ಲೀಸಿಂಗ್) ಯನ್ನು ಕಳೆದ 5 ವರ್ಷಗಳಲ್ಲಿ ಅಂದಾಜು ರೂ. 51.61 ಲಕ್ಷಗಳಷ್ಟು ಸಂದಾಯವಾಗಿರುತ್ತದೆ.

ಇ) ಕರ್ನಾಟಕ ರಾಜ್ಯಕ್ಕೆ ಬಂದುಮಾರಾಟವಾದ ಯಂತ್ರಗಳಿಗೆ ತಕ್ಕಂತೆ ಆ ಯಂತ್ರಗಳ ಮೇಲಿನ ಮಾರಾಟ ತೆರಿಗೆ, ವಹಿವಾಟು ತೆರಿಗೆ ಹಾಗೂ ಪ್ರವೇಶ ತೆರಿಗೆ ಪೂರ್ಣವಾಗಿ ಸಂದಾಯವಾಗಿರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಮೋದಿ ಜೆರಾಕ್ಸ್ ಕಂಪನಿಯಿಂದ ಕರ್ನಾಟಕ ರಾಜ್ಯಕ್ಕೆ ಬರುತ್ತಿರುವಂತಹ ಯಂತ್ರಗಳ ಬಗ್ಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಸರ್ಕಾರದವರು ಹೇಳಿದ್ದಾರೆ, 3048 ಯಂತ್ರಗಳು ಬಂದಿವೆ ಎಂದು ನನಗೆ ಬಂದಿರುವ ಮಾಹಿತಿ ಪ್ರಕಾರ ಕಳೆದ 5 ವರ್ಷಗಳಲ್ಲಿ ಸುಮಾರು 10 ಸಾವಿರ ಯಂತ್ರಗಳು ಕರ್ನಾಟಕ ರಾಜ್ಯಕ್ಕೆ ಬಂದು ಮಾರಾಟವಾಗಿವೆ. ಆದರೆ ಸ್ಥಳೀಯ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವಹಿವಾಟು ತೆರಿಗೆಯ ಸರಿಯಾದ ಅಂಕಿಅಂಶಗಳನ್ನು ತೋರಿಸದೇ ಅವರು ತೆರಿಗೆಯನ್ನು ವಂಚಿಸುತ್ತಾ ಇರುವುದರಿಂದ ರಾಜ್ಯ ಸರ್ಕಾರಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ ಎನ್ನುವ ಮಾಹಿತಿ ನನಗೆ ಬಂದಿರುವುದನ್ನು ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಸ್. ಶಿವಣ್ಣ: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಮೋದಿ ಜೆರಾಕ್ಸ್ ಯಂತ್ರಗಳು ಬಂದಿರತಕ್ಕಂಥಾದ್ದರಲ್ಲಿ ಎರಡು ವಿಧಗಳು ಇವೆ. ಕಂಪನಿಂದ ಬಂದಿರತಕ್ಕಂಥಾದ್ದು 2450 ಯಂತ್ರಗಳು ಮತ್ತು ಮೋದಿ ಫೈನಾನ್ಷಿಯಲ್ ಸರ್ವೀಸ್ ಡೆಲ್ಲಿ ಎಂದು ಒಂದು ಸಂಸ್ಥೆ ಇದೆ. ಇದರಿಂದ ಬಂದಿರತಕ್ಕಂಥಾದ್ದು 59 ಯಂತ್ರಗಳು. ಒಟ್ಟು 3048 ಯಂತ್ರಗಳು ಬಂದಿರತಕ್ಕಂಥಾದ್ದು, ಎಂದು ಮಾನ್ಯ ಸದ್ಸಯರ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇದರಲ್ಲಿ ತಮ್ಮ ಕಾಳಜಿ ಏನು ಎನ್ನತಕ್ಕಂಥಾದ್ದು ಕೂಡ ನನಗೆ ಅರ್ಥವಾಗುತ್ತದೆ. ತಾವು ರಾಜ್ಯಕ್ಕೆ 10 ಸಾವಿರ ಮೋದಿ ಜೆರಾಕ್ಸ್ ಯಂತ್ರಗಳು ಬಂದಿವೆ ಎನ್ನುವ ಮಾತನ್ನು ಏನು ಹೇಳುತ್ತಿದ್ದೀರಿ ; ಮೋದಿ ಜೆರಾಕ್ಸ್ ಕಂಪನಿಯಿಂದ ನೇರವಾಗಿ ಪಡೆದಂತ ಯಂತ್ರಗಳಿಗೆ ನಾವು ಯಾವುದೇ ತೆರಿಗೆಯನ್ನು ಇಲ್ಲಿ ವಿಧಿಸುವುದಕ್ಕೆ ಆಗುವುದಿಲ್ಲ. ಆದರೆ ಇಲ್ಲಿ ಮಾರಾಟಕ್ಕೆ ಅಂತ ತಂದ ಯಂತ್ರಗಳ ಮೇಲೆ ನಾವು ತೆರಿಗೆ ವಿಧಿಸಿರುವುದು ಸುಮಾರು 3048 ಯಂತ್ರಗಳು. ನಾವು ಎಷ್ಟು ಮಾರಾಟ ತೆರಿಗೆಯನ್ನು ವಿಧಿಸಿದ್ದೇವೆ, ಎಷ್ಟು ಪ್ರವೇಶ ತೆರಿಗೆಯನ್ನು ವಿಧಿಸಿದ್ದೇವೆ ಮತ್ತು ಎಷ್ಟು ವಹಿವಾಟು ತೆರಿಗೆಯನ್ನು ವಿಧಿಸಿದ್ದೇವೆ ಎನ್ನುವ ಬಗ್ಗೆ ಉತ್ತರವನ್ನು ತಮಗ ಕೊಟ್ಟಿದ್ದೇವೆ. ನೇರವಾಗಿ ಅವರು ಕಂಪನಿಯಿಂದ ಯಂತ್ರಗಳನ್ನು ಪಡೆದರೆ ಅದಕ್ಕೆ ತೆರಿಗೆ ವಿಧಿಸತಕ್ಕಂಥ ಜವಾಬ್ದಾರಿ ನಮಗೆ ಬರುವುದಿಲ್ಲ. ಅವರು ಇಲ್ಲಿ ಮಾರಾಟಕ್ಕೆ ಅಂತ ತಂದು ಅವರು ಇಲ್ಲಿ ಮಾರಾಟ ಮಾಡುವುದರ ಮೇಲೆ ನಾವು ತೆರಿಗೆಯನ್ನು ವಿಧಿಸುತ್ತೇವೆ. ಪ್ರವೇಶ ತೆರಿಗೆಯನ್ನು ವಿಧಿಸುತ್ತೇವೆ.

**ಬಾಗೇಪಲ್ಲಿ ತಾಲ್ಲೂಕು ಪರಗೋಡು ಬಳಿ ಚಿತ್ರಾವತಿ ನದಿಗೆ ಅಣೆಕಟ್ಟು ನಿರ್ಮಾಣ**

350 (3275) ಶ್ರೀ ಸಂಪಿಗಿ ಎನ್ (ಬಾಗೇಪಲ್ಲಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕು ಪರಗೋಡು ಬಳಿ ಇರುವ ಚಿತ್ರಾವತಿ ನದಿಗೆ ಅಣೆಕಟ್ಟು ನಿರ್ಮಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹಾಗೂ ಅಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು ;

ಇ) ಅಣೆಕಟ್ಟನ್ನು ಕಟ್ಟಿದಲ್ಲಿ ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕು ಹಾಗೂ ಪಟ್ಟಣಗಳಿಗೆ ಫ್ಲೋರೈಡ್ ಇಲ್ಲದ ಕುಡಿಯುವ ನೀರು ಪೂರೈಸಲು ಸಾಧ್ಯವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಕೋಲಾರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು, ಪರಗೋಡು ಹತ್ತಿರ ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸಕೆರೆ ನಿರ್ಮಾಣ ಮಾಡುವ ವಿಚಾರ ಸರ್ಕಾರದ ಗಮನದಲ್ಲಿರುತ್ತದೆ.

ಆ) ಸದರಿ ಹೊಸಕೆರೆ ನಿರ್ಮಾಣದ ಸಂಬಂಧ ರೂ.800.00ಲಕ್ಷಗಳಅಂದಾಜನ್ನು ತಯಾರಿಸಿ, ಬಾಗೇಪಲ್ಲಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸಲು ಹಾಗೂ 589 ಎಕರೆ ಅಚ್ಚು ಕಟ್ಟಿಗೆ ನೀರಾವರಿ ಸೌಲಭ್ಯ ಒದಗಿಸಲು ಯೋಚಿಸಲಾಗಿರುತ್ತದೆ. ಪ್ರಸ್ತಾಪಿತ ಕಾಮಗಾರಿಗೆ 1999-2000ನೇ ಸಾಲಿನ ಅಯವ್ಯಯದಲ್ಲಿ ರೂ.800.00 ಲಕ್ಷ ಅಂದಾಜು ಮೊತ್ತ ಮತ್ತು ರೂ.239.96 ಲಕ್ಷ ಅನುದಾನವನ್ನು ಒದಗಿಸಲಾಗಿತ್ತು. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ (2000-2001) ಈ ಕಾಮಗಾರಿಯನ್ನು ರೂ.150.00 ಲಕ್ಷಗಳ ಅನುದಾನದೊಂದಿಗೆ ಸೇರಿಸಲಾಗಿದೆ. ಯೋಜನೆಯ ಅಂದಾಜನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಮುಂದೆ ಮರು ಮಂಡಿಸಬೇಕಾಗಿರುತ್ತದೆ.

ಇ) ಸದರಿ ಉದ್ದೇಶಿತ ಹೊಸ ಕೆರೆಯ ನಿರ್ಮಾಣದಿಂದ ಬಾಗೇಪಲ್ಲಿ ಪಟ್ಟಣಕ್ಕೆ ಮಾತ್ರ ಫ್ಲೋರೈಡ್ ರಹಿತ ಕುಡಿಯುವ ನೀರನ್ನು ಸರಬರಾಜು ಮಾಡಲು ಪ್ರಸ್ತಾಪಿಸಲಾಗಿದೆ. ಗುಡಿಬಂಡೆ ತಾಲ್ಲೂಕು ಹಾಗೂ ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜಿನ ಸಾಧ್ಯತೆ ಇರುವುದಿಲ್ಲ.

ಶ್ರೀ ಎನ್.ಸಂಪಂಗಿ : ಮಾನ್ಯ ಅಧ್ಯಕ್ಷರೇ, 1999-2000ನೇ ಇಸವಿಯ ಆಯವ್ಯಯದಲ್ಲಿ ಸುಮಾರು 239 ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿತ್ತು. ಆದರೆ 2000-2001ನೇ ಇಸವಿಯ ಆಯವ್ಯಯದಲ್ಲಿ ಸುಮಾರು 150 ಲಕ್ಷ ರೂಪಾಯಿಗಳ ಅನುದಾನವನ್ನು ಸೇರಿಸಲಾಗಿದೆ. ಇದರಿಂದ ನಮಗೆ ಸ್ವಲ್ಪ ಅನುಮಾನ ಬಂದಿದೆ. ಈ ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸ ಕೆರೆಯನ್ನು ಪರಗೋಡು ಹತ್ತಿರ ನಿರ್ಮಿಸುವ ವಿಚಾರದಲ್ಲಿ ಏನಾದರೂ ಗೊಂದಲವಾಗುತ್ತಿದೆಯೆ ಎನ್ನುವ ವಿಚಾರದಲ್ಲಿ ನಮಗೆ ಸ್ವಲ್ಪ ಅನು ಮಾನವಿರುವುದರಿಂದ ಸಣ್ಣ ನೀರಾವರಿ ಮಾನ್ಯ ಸಚಿವರು ಆ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ, ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಂಪಂಗಿ ಯವರು ಹೇಳಿದ ಹಾಗೆ ಈ ಬಗ್ಗೆ ಸುಮಾರು 8 ಕೋಟಿ ರೂಪಾಯಿಗಳಿಗೆ ಹೋದ ಸಾರಿಯ ಆಯವ್ಯಯದಲ್ಲಿ ಅಂದಾಜು ಮಾಡಲಾಗಿತ್ತು. ಪಿ.ಎ.ಸಿ. ಕಮಿಟಿಯವರು ಹೋಗಿ ಇನ್ಸ್‌ಪೆಕ್ಷನ್ ಮಾಡಿದಾಗ ಅದರಲ್ಲಿ

ಸ್ವಲ್ಪ ಹಣ ಕಡಿಮೆಯಾಗಿದೆ; ಏಕೆಂದರೆ ಚಾನಲ್ ಹೊಡೆಯತಕ್ಕಂಥ ವಿಚಾರ ದಲ್ಲಿ 5 ಕಿಲೋಮೀಟರ್ ಜಾಸ್ತಿ ಆಗುತ್ತಿತ್ತು, ಅದನ್ನು ಕಡಿಮೆ ಮಾಡಬಹುದು ಎನ್ನತಕ್ಕಂಥ ವಿಚಾರ ದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡುವ ವಿಚಾರ ಪಿ.ಎ.ಸಿ. ಮುಂದೆ ಇದೆ. ಈಗ 150 ಲಕ್ಷ ರೂಪಾಯಿಗಳ ಅಂದಾಜು ಮೊತ್ತ ಎಂದ ಎನು ಇದೆ ಇದು ಸದ್ಯಕ್ಕೆ ಮಾತ್ರ ಇಟ್ಟಿರುವುದು. ಪಿ.ಎ.ಸಿ ಅವರು ಸಂಪೂರ್ಣ ವಾಗಿ ಏನು ವರದಿಯನ್ನು ಕೊಡುತ್ತಾರೆ ಅದು ಚಿತ್ರಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುವ ವಿಚಾ ರದ ಬಗ್ಗೆ ಮಾತ್ರ. ಆದರೆ ನಮ್ಮ ಇಲಾಖೆ ಕೊಟ್ಟಿರುವ ಉತ್ತರದಲ್ಲಿ ಹೊಸಕೆರೆ ನಿರ್ಮಾಣ ಅಂತ ಕೊಟ್ಟಿದ್ದಾರೆ. ಅದನ್ನು ಸಹ ನಾವು ಸರಿ ಮಾಡುತ್ತೇವೆ. ತಮ್ಮ ಗಮನಕ್ಕೆ ಬರಲಿ ಅಂತ as it is ಅದನ್ನು ಹಾಗೇ ಕಳಿಸಿದೆ. ಅದು ಅಣೆಕಟ್ಟು ಕಟ್ಟುವುದು, ಹೊಸ ಕೆರೆ ನಿರ್ಮಾಣದ ಮಾತು ಇಲ್ಲ. ಆದರಿಂದ ಸುಮಾರು 37 ಸಿ.ಎಫ್.ಟಿ. ಯಷ್ಟು ನೀರು ಪರಗೋಡು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಬರುತ್ತದೆ. ಮತ್ತು ಗುಡಿಬಂಡೆ ತಾಲ್ಲೂಕು ಹಾಗೂ ಪಟ್ಟಣಗಳಿಗೂ ಕುಡಿಯುವ ನೀರು ಒದಗಿಸಲಾಗುತ್ತದೆ. ಏಕೆಂದರೆ ಅಲ್ಲಿ ಫ್ಲೋರೈಡ್ ಜಾಸ್ತಿ ಇದೆ ಅಂತ ಕಂಡು ಬರುತ್ತಿದೆ. ಅದರ ಸಲುವಾಗಿಯೇ ಈ ಚಿತ್ರಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುತ್ತಾ ಇರುವುದು, ಇದರಲ್ಲಿ ಯಾವುದೇ ತರಹದ ಅನುಮಾನ ತಮಗೆ ಬೇಡ. ಈ ಬಗ್ಗೆ ಸಂಪೂರ್ಣವಾಗಿರತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಆದಷ್ಟು ಜಾಗ್ರತೆಯಾಗಿ ನಾವು ಈ ಕಾರ್ಯಕ್ರಮ ಮುಗಿಸಿ ಕೊಡುತ್ತೇವೆ.

**ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಉಪ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ**

352 (3147) ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ (ಅಣ್ಣಯ್ಯ)(ತುರುವೇಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಪೋಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಅಂತಹ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳು ತುರುವೇಕೆರೆಯ ತಾಲ್ಲೂಕು ಮಾಯಸಂದ್ರ ಪೋಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಏಕೆ ಈ ಉಪ - ಠಾಣೆಯನ್ನು ಮೇಲ್ದರ್ಜೆಗೆ ಏರಿಸಬೇಕೆನ್ನುವ ಕಾರಣವನ್ನು ಕೊಡುತ್ತಾ ಈಗ ಆ ಹೋಬಳಿಯಲ್ಲಿ ಸುಮಾರು 92 ಹಳ್ಳಿಗಳು ಇದ್ದು, ಸುಮಾರು 25-26 ಕಿಲೋಮೀಟರ್ ಅಂತರ ಇರತಕ್ಕಂಥ ಹಳ್ಳಿಯಲ್ಲಿ ಮೊನ್ನೆ ದಿನಾಂಕ 28-3-2000ನೇ ಇಸವಿಯಲ್ಲಿ ಕುಣಿಗಲ್‌ನಲ್ಲಿರತಕ್ಕಂಥ ಲೈಫ್ ಇನ್ಷ್ಯೂರೆನ್ಸ್ ಕಾರ್ಪೊರೇಷನ್‌ನ ಅಸಿಸ್ಟೆಂಟ್ ಬ್ರಾಂಚ್ ಮ್ಯಾನೇಜರ್